ಸೃಜನಿ

SRUJANI: Indian Journal of Innovative Research and Development (SIJIRD)
Volume-5 Issue 3, July-August 2026, Pp. 117-121
Bi-Monthly, Peer-Reviewed, Open Access, Indexed Journal

I S S N: 2583-3510
SIRDF JOURNALS
editor@srujani.in
www.srujani.in

# 'ನೀರು ತಂದವರು' – ಕಥೆಯಲ್ಲಿನ ಸಾಮಾಜಿಕ ಸಂಘರ್ಷ

**ವಿನಯಕುಮಾರ್ ಹೆಚ್. ಸಿ[1] ಮತ್ತು ಡಾ. ಬಿ. ಎಸ್. ಸುದೀಪ್[2]**
[1]ಸಂಶೋಧನಾ ವಿದ್ಯಾರ್ಥಿ, [2] ಮುಖ್ಯಸ್ಥರು ಹಾಗೂ ಸಹ ಪ್ರಾಧ್ಯಾಪಕರು
ಕನ್ನಡ ಸ್ನಾತಕೋತ್ತರ ವಿಭಾಗ, ಜೆ.ಎಸ್.ಎಸ್. ಕಲಾ, ವಾಣಿಜ್ಯ ಮತ್ತು ವಿಜ್ಞಾನ ಕಾಲೇಜು, ಮೈಸೂರು

***Abstract:***
*ಸಾಹಿತ್ಯವು ಸಮಾಜದ ಪ್ರತಿಬಿಂಬವಾಗಿದೆ.ಸಾಹಿತ್ಯದಲ್ಲಿ ಒಂದು ಪ್ರದೇಶದ ಜನರ ಜೀವನ ಸಂಸ್ಕೃತಿ, ಆಚಾರ, ವಿಚಾರ, ಭಾಷೆ, ನಂಬಿಕೆಗಳು ಹಾಗೂ ಸಮಸ್ಯೆಗಳು ಚಿತ್ರಿತವಾಗಿರುತ್ತದೆ.ಇದನ್ನು ಪ್ರಾದೇಶಿಕ ಸಂಸ್ಕೃತಿ/ಪ್ರಾದೇಶಿಕತೆ ಎಂದು ಗುರುತಿಸಲಾಗುತ್ತದೆ.ಕನ್ನಡ ಸಾಹಿತ್ಯದಲ್ಲಿ ಪ್ರಾದೇಶಿಕತೆಯನ್ನು ಪರಿಣಾಮಕಾರಿಯಾಗಿ ಅಭಿವ್ಯಕ್ತಿಗೊಳಿಸುತ್ತಿರುವ ಪ್ರಮುಖ ಸಾಹಿತಿಗಳಲ್ಲಿ ಅಮರೇಶ ನುಗಡೋಣಿ ಅವರು ಒಬ್ಬರು.ಉತ್ತರ ಕರ್ನಾಟಕದ ಪ್ರಾದೇಶಿಕತೆ, ಗ್ರಾಮೀಣ ಬದುಕನ್ನು ತಮ್ಮ ಸಾಹಿತ್ಯದ ಮೂಲಕ ಪರಿಚಯಿಸುತ್ತಿರುವ ಅವರು, ಅಲ್ಲಿನ ಜನಜೀವನದ ನೈಜಚಿತ್ರಣವನ್ನು ನೀಡಿದ್ದಾರೆ.ಉತ್ತರ ಕರ್ನಟಕದ ಗ್ರಾಮೀಣ ಪರಿಸರ, ಅಲ್ಲಿನ ಜನರ ಬದುಕು, ಭಾಷೆ–ಸಂಸ್ಕೃತಿ ಮತ್ತು ಸಾಮಾಜಿಕ ಸಮಸ್ಯೆಗಳು ಅವರ ಸಾಹಿತ್ಯದ ಮುಖ್ಯ ವಸ್ತುಗಳಾಗಿವೆ. ಸರಳವಾದ ಆಡುಮಾತಿನ ಭಾಷೆ ಹಾಗೂ ವಾಸ್ತವಿಕ ಚಿತ್ರಣ ಅವರ ಸಾಹಿತ್ಯದ ವೈಶಿಷ್ಟ್ಯವಾಗಿದೆ. ಪ್ರಸ್ತುತ ಲೇಖನದಲ್ಲಿ ಅಮರೇಶ ನುಗಡೋಣಿ ಅವರ 'ನೀರು ತಂದವರು' ಕಥೆಯಲ್ಲಿನ ಸಾಮಾಜಿಕ ಸಂಘರ್ಷವನ್ನು ಕುರಿತು ಅಧ್ಯಯನ ಮಾಡಲಾಗಿದೆ.*

***Keywords:*** *ಕನ್ನಡ ಸಾಹಿತ್ಯ, ಅಮರೇಶ ನುಗಡೋಣಿ, ನೀರು ತಂದವರು, ಸಾಮಾಜಿಕ ಸಂಘರ್ಷ.*

## ಪೀಠಿಕೆ

ಅಮರೇಶ ನುಗಡೋಣಿ ಅವರ ಸಾಹಿತ್ಯದಲ್ಲಿ ಉತ್ತರ ಕರ್ನಾಟಕದ ಹಳ್ಳಿಗಳು, ಹೊಲ–ಗದ್ದೆಗಳು, ಬಯಲು ಸೀಮೆಯ ವಾತಾವರಣ, ಬಿಸಿಲು ಮತ್ತು ಬರಗಾಲದ ಚಿತ್ರಣ ಕಂಡುಬರುತ್ತದೆ.ಈ ಪ್ರದೇಶದ ಪ್ರಕೃತಿ ಮತ್ತು ಪರಿಸರವು ಅವರ ಕೃತಿಗಳಿಗೆ ವಿಶಿಷ್ಟವಾದ ಹಿನ್ನೆಲೆಯನ್ನು ಒದಗಿಸುತ್ತದೆ.ಉತ್ತರ ಕರ್ನಾಟಕದ ಗ್ರಾಮೀಣ ಪರಿಸರ ಮತ್ತು ಜನಜೀವನದ ಚಿತ್ರಣಗಳನ್ನು ಗುರುತಿಸಿಕೊಳ್ಳಬಹುದು. ಅಲ್ಲಿನ ರೈತರು, ಕೂಲಿಕಾರರು, ಬಡವರು ಹಾಗೂ ಸಾಮಾನ್ಯ ಜನರ ಬದುಕನ್ನು ಅವರು ತಮ್ಮ ಕತೆಗಳಲ್ಲಿ ಚಿತ್ರಿಸಿದ್ದಾರೆ.ಜನರ ಕಷ್ಟ–ನಷ್ಟಗಳು, ದುಡಿಮೆ, ಬಡತನ ಮತ್ತು ಬದುಕಿನ ಹೋರಾಟಗಳ ವಿವಿಧ ಮುಖಗಳು ಅವರ ಸಾಹಿತ್ಯದಲ್ಲಿ ಸಹಜವಾಗಿ ಮೂಡಿಬರುತ್ತದೆ. ಉತ್ತರ ಕರ್ನಾಟಕದ ಆಡುಮಾತು, ಸ್ಥಳೀಯ ಪದಗಳು ಮತ್ತು ಭಾಷಾ ವೈಶಿಷ್ಟ್ಯಗಳು ಕಂಡುಬರುತ್ತವೆ. ಇದರಿಂದ ಪಾತ್ರಗಳು ಜೀವಂತವಾಗಿ ಕಾಣಿಸುತ್ತವೆ. ಭಾಷೆಯ ಮೂಲಕವೇ ಆ ಪ್ರದೇಶದ ಸಂಸ್ಕೃತಿ ಮತ್ತು ಜನರ ಮನೋಭಾವಗಳು ವ್ಯಕ್ತವಾಗುತ್ತವೆ. ಅವರ ಕಥಾ ಸಾಹಿತ್ಯದಲ್ಲಿ ಕೇವಲ ಪ್ರದೇಶದ ಸೌಂದರ್ಯ

***Please cite this article as:*** ವಿನಯಕುಮಾರ್, ಹೆಚ್. ಸಿ. ಮತ್ತು ಬಿ. ಎಸ್. ಸುದೀಪ್. (2026). 'ನೀರು ತಂದವರು' – ಕಥೆಯಲ್ಲಿನ ಸಾಮಾಜಿಕ ಸಂಘರ್ಷ. *ಸೃಜನಿ: ಇಂಡಿಯನ್ ಜರ್ನಲ್ ಆಫ್ ಇನ್ನೋವೇಟಿವ್ ರೀಸರ್ಚ್ ಅಂಡ್ ಡೆವಲಪ್‌ಮೆಂಟ್*, 5(3), 117–121

ಚಿತ್ರಿತವಾಗಿಲ್ಲ. ಅಲ್ಲಿನ ಸಮಸ್ಯೆಗಳು ಬಿಂಬಿತವಾಗಿವೆ. ಬಡತನ, ಶೋಷಣೆ, ಅಸಮಾನತೆ, ನಿರುದ್ಯೋಗ, ಬರಗಾಲ ಮತ್ತು ಸಾಮಾಜಿಕ ಅನ್ಯಾಯದಂತಹ ಸಮಸ್ಯೆಗಳ ವಿವಿಧ ಮುಖಗಳು ಅನಾವರಣಗೊಂಡಿವೆ. ಅಮರೇಶ ನುಗಡೋಣಿ ಅವರ ಸಾಹಿತ್ಯದ ಪ್ರಮುಖ ಗುಣ ವಾಸ್ತವಿಕತೆ. ಗ್ರಾಮೀಣ ಬದುಕನ್ನು ಅತಿಯಾಗಿ ಸುಂದರಗೊಳಿಸದೆ ಅದರ ನೈಜ ಸ್ವರೂಪ ಚಿತ್ರಿಸುತ್ತಾರೆ.ಜನರ ಸುಖ–ದುಃಖ, ನಂಬಿಕೆ–ನಿರಾಶೆ ಮತ್ತು ಹೋರಾಟಗಳು ಸಹಜವಾಗಿ ಮೂಡಿಬಂದಿವೆ.

'ನೀರು ತಂದವರು' ಅಮರೇಶ ನುಗಡೋಣಿಯವರ ಪ್ರಸಿದ್ಧ ಕತೆಗಳಲ್ಲಿ ಒಂದು. ಈ ಕತೆಯ ಹಂದರದಲ್ಲಿ ಹೈದ್ರಾಬಾದ್ ಕರ್ನಾಟಕ ಪ್ರಾದೇಶಿಕ ಭಾಷೆ ಮತ್ತು ಸಂಸ್ಕೃತಿ ಗಟ್ಟಿಯಾಗಿ ಅಭಿವ್ಯಕ್ತಿಗೊಂಡಿದೆ. ಸೌಹಾರ್ದತೆಯಿಂದ ಇರಬೇಕಾದ ಆಧುನಿಕ ಗ್ರಾಮ ಪರಿಸರಗಳು, ಜಾತಿ ಪ್ರತಿಷ್ಠೆಯ ಕಾರಣದಿಂದ ಸಂಘರ್ಷದ ಹೀನ ಸ್ಥಿತಿಗೆ ಇಳಿಯುತ್ತಿರುವ ಗ್ರಾಮ ಸಮಾಜಗಳ ಮತ್ತು ಇಂದಿಗೂ ಜಾತಿ ಪ್ರತಿಷ್ಠೆಯನ್ನು ತಲೆಗೇರಿಸಿಕೊಂಡಿರುವ ಕೆಟ್ಟ ಮನಸ್ಥಿತಿಗಳ ಮನುಷ್ಯರ ಚಿತ್ರಣವನ್ನು ಈ ಕತೆಯಲ್ಲಿ ಕಟ್ಟಿಕೊಟ್ಟಿದ್ದಾರೆ. ಈ ಕತೆಯಲ್ಲಿ ಕಲಹ–ಸಂಘರ್ಷ ಉಂಟಾಗುವುದು ಕ್ಷುಲ್ಲಕ ವಿಷಯದ ಕಾರಣವಾಗಿ, ಊರಿಗೆ ಸಾರಿಗೆ ವ್ಯವಸ್ಥೆ ಬೇಕೆಂಬುದು ಊರಿನವರ ಎಲ್ಲರ ಆಸೆ. ಅದಕ್ಕಾಗಿ ಊರಿನ ಮೇಲ್ಜಾತಿಯ ಜನ ಮನವಿ ಸಲ್ಲಿಸಿದಾಗ ಬಾರದ ಬಸ್ಸು, ಕೇರಿಯ ಜನ ಕೇಳಿಕೊಂಡಾಗ ಬರುತ್ತದೆ. ಹಾಗೂ ಕೇರಿಗೆ ಹೊಂದಿಕೊಂಡಂತೆ ಅದರ ಬಸ್ಸು ನಿಲ್ದಾಣವು ನಿರ್ಮಾಣವಾಗುತ್ತದೆ. ಇದು ಊರಿನ ಮೇಲ್ಜಾತಿಯ ಜನರಿಗೆ ತಮ್ಮ ಪ್ರತಿಷ್ಠೆ ಕಡಿಮೆಯಾಯಿತೆಂದು ಭಾವಿಸುವಂತೆ ಆಗುತ್ತದೆ. ಇಲ್ಲಿಂದ ಸಂಘರ್ಷ ಆರಂಭವಾಗುತ್ತದೆ. ಊರಿನ ಜನರಿಂದ ಕೇರಿಯ ಜನರಿಗೆ ಕಿರುಕುಳ, ಅಸೂಯೆ, ದ್ವೇಷ ಭಾವ, ಅಸಹನೆ, ಪ್ರತೀಕಾರದಂತಹ ಚಟುವಟಿಕೆಗಳು ನಡೆಯುತ್ತದೆ. ಇದರ ಫಲವಾಗಿ ಗೋಲಿಬಾರ್ ಕೂಡ ಸಂಭವಿಸುತ್ತದೆ. ಮುಂದುವರಿದಂತೆ ಇಡೀ ಊರು ಎರಡು ಭಾಗವಾಗಿ ದ್ವೇಷ–ಪ್ರತಿಕಾರದಲ್ಲಿ ಸದಾ ಕುದಿಯುವಂತೆ ಆಗುತ್ತದೆ. ಆಧುನಿಕ ಗ್ರಾಮಗಳಲ್ಲಿ ಆಧುನಿಕತೆ ಪ್ರವೇಶವಾದರು ಅದು ಕೇವಲ ಭೌತಿಕ ಮಟ್ಟದಲ್ಲಿ ಮಾತ್ರವೇ ಹೊರತು, ಬೌದ್ಧಿಕ ಮಟ್ಟದಲ್ಲಿ ಅಲ್ಲ ಎಂದು ಈ ಕಥೆ ಆರಂಭದಲ್ಲಿ ಬಿಂಬಿಸುತ್ತದೆ. ಈ ಕಥೆಯಲ್ಲಿ ಸಾರಿಗೆ, ಬಸ್ಸು, ಬಸ್ಸು ನಿಲ್ದಾಣ, ಪೊಲೀಸ್ ಇವು ಭೌತಿಕವಾಗಿ ಬಂದಿರುವ ಆಧುನಿಕತೆಯ ಸಂಕೇತಗಳಾಗಿವೆ. ಆದರೆ ಊರಿಗೆ, ಸಮಾಜಕ್ಕೆ ಬೌದ್ಧಿಕ ರೂಪದ ಆಧುನಿಕತೆ ಇನ್ನೂ ಬಂದಿಲ್ಲ. ಸೌಹಾರ್ದತೆ, ಸಹಬಾಳ್ವೆ, ತಾರತಮ್ಯ ರಹಿತ ಬದುಕು, ಮಾನವೀಯತೆ ಇವು ಬೌದ್ಧಿಕ ರೂಪದ ಆಧುನಿಕತೆಗಳಾಗಿವೆ. ಕಥೆಗಾರರು ಈ ಪ್ರಸಂಗದಿಂದ ಇಡೀ ಭಾರತದ ಗ್ರಾಮ ಸಮಾಜದ ಮನಸ್ಥಿತಿಯನ್ನು ಪರೋಕ್ಷವಾಗಿ ನೆನಪಿಸುತ್ತಾರೆ.ಈ ಕಥೆಯಲ್ಲಿ ಊರಿನವರು ಮತ್ತು ಊರಿನ ಕೇರಿಯವರ ನಡುವಿನ ಸಂಘರ್ಷ ಇಷ್ಟಕ್ಕೆ ನಿಲ್ಲದೆ ಊರಿನ ಮೇಲ್ಜಾತಿಯವರ ಅಮಾನವೀಯ ಮುಖಗಳನ್ನು ಅನಾವರಣ ಮಾಡಿಸುತ್ತಾರೆ. ದಲಿತ ಕೇರಿಯವರು ತಮ್ಮ ದ್ವೇಷವನ್ನು ಮರೆತು ಊರಿನ ವರೆಗೆ ನೀರು ಕೊಡುವ ಕಾರ್ಯವನ್ನು ಮಾಡುತ್ತಾರೆ. ಇದು ಹೊಂದಾಣಿಕೆ, ಸಹಬಾಳ್ವೆ, ಶಾಂತಿ ಬದುಕಿನ ಮತ್ತು ಮನುಷ್ಯತ್ವದ ಬಾಳ್ವೆಯ ಸಂಕೇತವಾಗಿದೆ.

ನೀರು ತಂದವರು ಕಥೆಯ ಮುಖ್ಯವಸ್ತು ನೀರಿನ ಸಮಸ್ಯೆ. ನೀರು ಎಂಬುದು ಎಲ್ಲರಿಗೂ ಅಗತ್ಯವಾದ ಮೂಲಭೂತ ಸಂಪನ್ಮೂಲ. ಆದರೆ ಜಾತಿ ವ್ಯವಸ್ಥೆಯ ಕಾರಣದಿಂದ ನೀರಿನಂತಹ ಸಾಮಾನ್ಯ ಸಂಪನ್ಮೂಲವು ಸಾಮಾಜಿಕ ಅಸಮಾನತೆಯ ಕಾರಣವಾಗುತ್ತದೆ. ಕಥೆಯಲ್ಲಿ ಗ್ರಾಮೀಣ ಸಮಾಜದ ಮೇಲ್ಜಾತಿ ಮತ್ತು ದಲಿತ ಸಮುದಾಯಗಳ ನಡುವಿನ ಸಂಬಂಧಗಳು, ಸಂಘರ್ಷಗಳು ಹಾಗೂ ನೀರಿನ ವಿಚಾರದಲ್ಲಿ ಉಂಟಾಗುವ ಭಿನ್ನಾಭಿಪ್ರಾಯಗಳು ಚಿತ್ರಿತವಾಗುತ್ತವೆ. ನೀರಿನ ಸಮಸ್ಯೆಯು ಕೇವಲ ದಾಹ

ನೀಗಿಸುವ ಪ್ರಶ್ನೆಯಾಗದೇ ಸಮಾನತೆ ಮತ್ತು ಮಾನವೀಯತೆಯ ಪ್ರಶ್ನೆಯಾಗಿ ರೂಪುಗೊಳ್ಳುತ್ತದೆ.

ಸಿದ್ದಪ್ಪನು ಕಥೆಯಲ್ಲಿ ಹಿರಿಯ ತಲೆಮಾರಿನ ಪ್ರತಿನಿಧಿಯಾಗಿ ಕಾಣಿಸಿಕೊಳ್ಳುತ್ತಾನೆ. ಸಾಮಾಜಿಕ ವಿಚಾರಗಳಲ್ಲಿ ಅನುಭಾವ ಮತ್ತು ವಿವೇಕ ಹೊಂದಿರುವ ವ್ಯಕ್ತಿಯಾಗಿ ಅವನ ಪಾತ್ರವಿದೆ. ಕಥೆಯಲ್ಲೂ ಹೊಸ ತಲೆಮಾರಿನ ವಿದ್ಯಾವಂತ ದಲಿತ ಹುಡುಗರ ಮನೋಭಾವ ಚಿತ್ರಿತವಾಗಿದೆ. ಅವರು ತಮ್ಮ ಹಕ್ಕುಗಳ ಬಗ್ಗೆ ಜಾಗೃತರಾಗಿದ್ದು, ಸಾಮಾಜಿಕ ಬದಲಾವಣೆಯನ್ನು ಬಯಸುತ್ತಾರೆ. ಆದರೆ ಹಿರಿಯ ತಲೆಮಾರಿನ ಮೌಲ್ಯಗಳೊಂದಿಗೆ ಅವರ ಭಿನ್ನಾಭಿಪ್ರಾಯಗಳು ವ್ಯಕ್ತವಾಗುತ್ತವೆ.

ನೀರು ಎಲ್ಲರಿಗೂ ಬೇಕಾದ ಜೀವನಾವಶ್ಯಕ. ಒಂದು ವರ್ಗ ನೀರನ್ನು ಕೊಡುವುದಿಲ್ಲ. ಮುಟ್ಟಿಸುವುದಿಲ್ಲ ಎಂಬ ಯಾಜಮಾನ್ಯ ಧೋರಣೆ ಹೊಂದಿದೆ. ಆದರೆ ನೀರಿಲ್ಲದೇ ಬದುಕನ್ನು ಸಾಗಿಸುವುದಾದರೂ ಹೇಗೆ? ಇನ್ನೂ ನೀರಿನ ಸಮಸ್ಯೆಯನ್ನು ಪರಿಹರಿಸಬೇಕಾದ ಮುಖಂಡರು ನೀರನ್ನು ತಮ್ಮ ಅಧಿಕಾರದ ದಾಳವನ್ನಾಗಿ ಬಳಸಿಕೊಳ್ಳುವ ಹುನ್ನಾರ ಇವರದ್ದಾಗಿದೆ. ಈ ಎಲ್ಲದರ ನಡುವೆಸಿದ್ದಪ್ಪ ಎರಡು ತುದಿಗಳನ್ನು ಬೆಸೆಯಬೇಕೆಂಬ ಕಾಳಜಿಯುಳ್ಳವನು. ತುಳಿತಕೊಳ್ಳಗಾದ ದಮನಿತ ಶಕ್ತಿಯ ಚೈತನ್ಯದಂತೆ ಕಾಣಬರುವ ಪುರುಷೋತ್ತಮ ಬದುಕಿನಲ್ಲಿಯೂ ಭರವಸೆಯನ್ನು ಮೂಡಿಸುವವನು. ಆದರೆ ವ್ಯವಸ್ಥೆಯನ್ನು ಹಾಗೆ ಉಳಸಿಕೊಂಡು ದರ್ಪವನ್ನು ಮರೆಯುವ ಪಾಟೀಲ, ಗೌಡ, ದೇಸಾಯಿ ಈ ಎಲ್ಲದರ ನಡುವೆ ಮಂತ್ರಿ ಸಮಾರಂಭಕ್ಕೆಂದು ಹಳ್ಳಿಗೆ ಬಂದವನು ನೀರನ್ನು ರಾಜಕೀಯ ದಾಳವನ್ನಾಗಿ ಮಾಡಿಕೊಳ್ಳುತ್ತಾನೆ. ಎರಡು ಸಣ್ಣಘಟನೆ ಜಾತಿ ಹಾಗೂ ರಾಜಕೀಯ ಶಕ್ತಿಗಳು ತಮ್ಮ ಅಸ್ತ್ರವನ್ನಾಗಿಸಿಕೊಳ್ಳುತ್ತಿರುವುದು ವಾಸ್ತವಕ್ಕೆ ಹಿಡಿದ ಕೈಗನ್ನಡಿಯಾಗಿದೆ. ಒಂದು ಅಸಹಾಯಕ, ಶೋಷಿತ ಜನಸಮುದಾಯದ ಎಚ್ಚೆತ್ತ ಜನರು ನೀರು ಕೊಡುವುದಕ್ಕೆ ವಿರೋಧ ವ್ಯಕ್ತಪಡಿಸುತ್ತಾರೆ. ಇದೇ ಜನಸಮುದಾಯ ಭಾವನಾತ್ಮಕ ನೆಲೆಯಲ್ಲಿ ಊರಿನ ಯುವಕರು ನೀರು ನೀಡಲು ಮುಂದಾಗುತ್ತಾರೆ. ಬಾಯಾರಿದವನು ನೀರನ್ನು ಕೇಳುತ್ತಾನೆ ಹೊರತು ಯಾರ ಮನೆಯ ನೀರೆಂದು ಕೇಳುವುದಿಲ್ಲ. ಹಾಗೆಯೇ ನೀರಿಗೆ ಯಾವುದೇ ಜಾತಿ ಇಲ್ಲ, ಇದು ನಿಸರ್ಗದತ್ತವಾದದು ಎಂಬುದು ಕತೆಯ ಪ್ರಮುಖ ಆಶಯವಾಗಿ ಕಂಡುಬರುತ್ತದೆ.

ಈ ಕತೆಯಲ್ಲಿ ದುರುಗನ ಪ್ರತಿಭಟನಾತ್ಮಕ ಆತ್ಮಹತ್ಯೆಯ ಪ್ರತಿಕಾರವಾಗಿ ಮೇಲ್ಜಾತಿಯ ಕ್ರೌರ್ಯವನ್ನು ದಲಿತ ಸಮುದಾಯ ಎದುರಿಸುವ ಎರಡು ಬಗೆಗಳ ಬಗ್ಗೆ ಇವೆ. ರಾಜಕೀಯ ಬದಲಾವಣೆಗಳು ಸ್ವಲ್ಪಮಟ್ಟಿಗೆ ಸಾಧ್ಯಮಾಡಿಕೊಟ್ಟಿರುವ ಅವಕಾಶದಿಂದಾಗಿ ಕೇರಿಯ ಯುವಕರು ಬಸ್‌ಸ್ಟ್ಯಾಂಡ್ ಕೇರಿಯ ಹತ್ತಿರವೇ ನಿರ್ಮಾಣವಾಗುವಂತೆ ಸರ್ಕಾರವನ್ನು ಒಪ್ಪಿಸಿ, ಆ ಕಾರ್ಯಕ್ರಮದ ಗುದ್ದಲಿ ಪೂಜೆಯನ್ನು ಮಂತ್ರಿಗಳನ್ನು ಆಹ್ವಾನಿಸಿ ಮಾಡುತ್ತಾರೆ. ಆದರೆ ಬಸ್‌ಸ್ಟ್ಯಾಂಡ್ ಕೇರಿಗೆ ಹತ್ತಿರವಾಗಬಾರದು ಎಂದು ಹಟ ಹಿಡಿದು ಊರಿನವರು ಬೆಂಕಿ ಹಚ್ಚಿ, ದೊಂಬಿ ಮಾಡಿ ಗೋಲಿಬಾರ್ ನಡೆಯಲು ಕಾರಣಕರ್ತರಾಗುತ್ತಾರೆ. ಆಗ ಅದೇ ರೀತಿಯ ಕ್ರೌರ್ಯದ ಇನ್ನೊಂದು ಮುಖ ಅನಾವರಣವಾಗುತ್ತದೆ. ಕೇರಿಗೆ ಒಂದು, ಊರಿಗೆ ಒಂದು,ಈ ರೀತಿಯಾಗಿ ಸರ್ಕಾರವು ಮಂಜೂರು ಮಾಡುತ್ತದೆ. ಇದೇರೀತಿ ಮತ್ತೊಂದು ಸಂದರ್ಭದಲ್ಲಿ ಕೇರಿಯ ಬೋರ್‌ವೆಲ್ ಹಾಳಾದಾಗ ಊರಿನವರು ಕೇರಿಯವರಿಗೆ ನೀರು ಕೊಟ್ಟಿರಲಿಲ್ಲ. ಈ ಸಾರಿ ಊರಿನ ಬೋರ್‌ವೆಲ್ ಕೆಟ್ಟಿದೆ. ಕೇರಿನ ಕೆಲವು ಶಿಕ್ಷಿತ ಯುವಕರು ನೀರು ಕೊಡುವುದು ಬೇಡ ಎಂದು ಹಟ ಹಿಡಿಯುತ್ತಾರೆ. ಕೆರೆಯಲ್ಲಿ ಕೂಡ ನೀರೆತ್ತಲು ಬಿಟ್ಟಿರುವುದಿಲ್ಲ. ಬಸ್‌ಸ್ಟ್ಯಾಂಡ್ ಹಾಗೂ ನೀರಿನ ಕಾರಣದಿಂದಾಗಿ ಊರು–ಕೇರಿಯ ಮಧ್ಯೆ ಬೂದಿಮುಚ್ಚಿದ ಕೆಂಡದಂತೆ ವೈಷಮ್ಯ ಹೊಗೆಯಾಗಿ

ಬೆಳೆಯಿತು. ಹಳೆಯ ತಲೆಮಾರಿನವರೆಗೆ ಈ ಜಗಳದ ಬಗ್ಗೆ ಮನಸ್ಸಿರಲಿಲ್ಲ. ಆದರೆ ಯುವಕರಿಗೆ ಈ ಮುದಿಜೀವಿಗಳು ಮೇಲ್ವರ್ಗದವರಿಂದ ತುಳಿಸಿಕೊಂಡು ಶಕ್ತಿ ಕಳೆದುಕೊಂಡಿವೆ. ಅಲ್ಲದೇ ಇದು ಬರೀ ತಮ್ಮ ಕೇರಿಯ ವಿಷಯವಲ್ಲ, ಅನೇಕ ಊರುಗಳಲ್ಲಿ ದಲಿತರಿಗೆ ಮಲ ತಿನ್ನಿಸುವುದು, ಅವರು ವಾಸಿಸುವ ಗುಡಿಸಲುಗಳಿಗೆ ಬೆಂಕಿಯಿಡುವುದು ಇವೆಲ್ಲಾ ನಡೆದಿವೆ. ಈ ಕಾರ್ಯಕ್ಕೆ ಪ್ರತಿಯಾಗಿ ಮೇಲ್ಜಾತಿಯವರಿಗೆ ಪಾಠ ಕಲಿಸಬೇಕಾಗಿದೆ ಎಂಬ ಅವರ ಮಾತುಗಳು ಸಮಸ್ಯೆಯನ್ನು ಮತ್ತಷ್ಟು ಮುನ್ನಲೆಗೆ ತರುತ್ತದೆ. ಈ ಸಂದರ್ಭದ ಚಿತ್ರಣದಿಂದ ಕೇರಿಯ ಹಿರಿಯ ಮತ್ತು ಕಿರಿಯ ತಲೆಮಾರಿನವರ ಮನೋಭಾವಗಳನ್ನು ಕಥೆಗಾರರು ಸೂಕ್ಷ್ಮವಾಗಿ ಚಿತ್ರಿಸಿದ್ದಾರೆ. ಹಿರಿಯ ತಲೆಮಾರಿನವರ ಸಹನೆಯ ಭಾವ ಮತ್ತು ಮಾನವೀಯತೆ ಗುಣ ಕಿರಿಯ ತಲೆಮಾರಿನವರಿಗೆ ಇಲ್ಲದಿರುವುದು ಕಾಣಬಹುದು. ಶಿಕ್ಷಿತ ದಲಿತ ಯುವಕರು ತಮ್ಮ ಹಕ್ಕುಗಳ ಬಗ್ಗೆ ಜಾಗೃತವಾದಂತೆ ಮೇಲ್ಜಾತಿಯವರ ಕ್ರೌರ್ಯವು ಅಮಾನುಷವಾಗಿ ಕಂಡುಬರುತ್ತದೆ. ಕಳೆದ ಎರಡು ದಶಕಗಳಲ್ಲಿ ಕರ್ನಾಟಕವು ಇಂಥ ಹಲವು ಹಿಂಸೆಯ ಘಟನೆಗಳಿಗೆ ಸಾಕ್ಷಿಯಾಗಿದೆ. ಸಮಾಜವು ಜಾತಿ ಸಮಾಜವಾಗಿ ಪರಿವರ್ತನೆ ಹೊಂದಿರುವುದು ಮತ್ತು ರಾಜಕೀಯ ಅಧಿಕಾರಕ್ಕಾಗಿ ಜಾತಿ ಸಂಘಟನೆಗಳನ್ನು ಬಲಿಷ್ಠಗೊಳಿಸುತ್ತಿರುವುದರಿಂದ ಜಾತಿ ಆಧಾರಿತ ಹಿಂಸೆ ಆಗಾಧ ಪ್ರಮಾಣದಲ್ಲಿ ಹೆಚ್ಚಿದೆ. ಇದಕ್ಕೆ ಪೂರಕವಾಗಿ ಜಾತಿಯ ಭಾವನೆಗಳು ಕಠೋರವಾಗುತ್ತವೆ. ಎಪ್ಪತ್ತು ಮತ್ತು ಎಂಬತ್ತರ ದಶಕಗಳಲ್ಲಿ ನಡೆದ ಚಳುವಳಿಗಳು ಜಾತಿವ್ಯವಸ್ಥೆಯ ಬಗ್ಗೆ ತಿರಸ್ಕಾರ, ಮುಜುಗರ ಹಾಗೂ ಪಾಪಪ್ರಜ್ಞೆಯ ಭಾವನೆಗಳನ್ನು ಸ್ವಲ್ಪ ಪ್ರಮಾಣದಲ್ಲಾದರೂ ಹುಟ್ಟಿಸಿದ್ದವು. ಆನಂತರದ ದಶಕಗಳಲ್ಲಿ ಜಾತಿಯ ಬಗ್ಗೆ ಬಲಗೊಂಡಿರುವ ಆ ಸೂಕ್ಷ್ಮ ಒರಟು ಹಾಗೂ ಅತಿವಿಶ್ವಾಸದ ಭಾವನೆಗಳು ಭಯ ಹುಟ್ಟಿಸುವಂತಿವೆ. ಅಮರೇಶ ನುಗಡೋಣಿಯವರ ಈ ಕಥೆಯಲ್ಲಿ ದಲಿತ ಸಮುದಾಯದ ಹಿಂಸೆಯ ಬಗ್ಗೆ, ಊರು–ಕೇರಿಯ ವೈಷ್ಯಮದ ಬಗ್ಗೆ ಕಳವಳ ವ್ಯಕ್ತಗೊಂಡಿದೆ. ಮೇಲ್ಜಾತಿಯವರು ದಲಿತ ಕೇರಿಗಳನ್ನು ಸುಟ್ಟುಬಿಡಲು ನಿರ್ಧಾರ ಕೈಗೊಂಡಿದ್ದಾರೆ. ಈ ಸಂದಿಗ್ಧದ ಪರಿಸ್ಥಿತಿಯಲ್ಲಿ ಕೇರಿಯ ಹಿರಿಯರಾದ ಸಿದ್ದಪ್ಪನ ಬಳಿಗೆ ಬರುತ್ತಾರೆ. ಈತ ಮೇಲ್ಜಾತಿಯಲ್ಲಿ ಹುಟ್ಟಿದರೂ ದಲಿತರಿಗೆ ಶಿಕ್ಷಣ ಪಡೆಯಲು ಮತ್ತು ಸಂಘಟಿತರಾಗಲು ಹೇಳಿಕೊಟ್ಟವ. ಆದರೆ ಹೊಸ ತಲೆಮಾರಿನ ದಲಿತ ಯುವಕರು ಈ ಸಿದ್ದಪ್ಪನನ್ನು ತಿರಸ್ಕರಿಸಿದ್ದಾರೆ. ಅವನಿಗೆ ಪ್ರತಿಕಾರದ ಹಿಂಸೆ ಪರಿಹಾರವಾಗಿ ಕಾಣುವುದಿಲ್ಲ. 'ಮಲ ತಿನ್ನಿಸಿದವರ ಕೈಗೆ ಅನ್ನ ನೀಡಬೇಕು, ಉಚ್ಚೆ ಕುಡಿಸಿದ ಕೈಯಿಗೆ ನೀರು ಕುಡಿಸಬೇಕು, ಬೆತ್ತಲೆ ಮಾಡುವವರಿಗೆ ಬಟ್ಟೆ ತೊಡಿಸಬೇಕು ಅವಾಗ ಅವರಿಗೆ ನಾಚಿಕೆ ಬರ್ತಾದೇನು ನೋಡಬೇಕು'[1] ಎಂಬುವುದು ಸಿದ್ದಪ್ಪನ ನಿಲುವು. ಅಷ್ಟೇ ಅಲ್ಲದೆ "ಈಗ ಎಲ್ಲಿ ಬೇಕಲ್ಲಿ ದಲಿತರಿಗೆ ಮಲ ತಿನಿಸ್ಯಾರ... ಉಚ್ಚೆ ಕುಡಿಸ್ಯಾರ, ಬೆತ್ತಲ ಮಾಡಿ ನಿಂದ್ರಿಸಿದ್ದಾರ ಇನ್ನೂ ಏನೇನೋ! ಪುರುಷೋತ್ತಮ ಮತ್ತವರ ಸಂಗಡಿಗರು ಇದಕ್ಕೆಲ್ಲ ಮರು ಏಟು ಕೊಡುವ ಬಗ್ಗೆ ಯೋಚಿಸ್ತಾರೆ ಅದು ನನಗೆ ಸರಿ ಅನ್ನಿಸುವುದಿಲ್ಲ. ಹಿಂಗಾದ್ರೆ ವ್ಯತ್ಯಾಸದ ಎಲ್ಲ್ಯಾದ? ನನ್ನ ಕೇಳಿದ್ರೆ ನಾವು ಪ್ರೀತಿಯನ್ನು ಮೆರೀಬೇಕು"[2] ಎಂಬುವುದು ಸಿದ್ದಪ್ಪನ ಅಭಿಪ್ರಾಯ ಹಾಗೂ ಕತೆಗಾರರ ನಿಲುವು ಕೂಡ ಆಗಿದೆ.

ಈ ಕಥೆಯಲ್ಲಿ ಸಿದ್ದಪ್ಪನು ತೋರುವ ಪರಿಹಾರವು ಗಾಂಧೀಜಿಯವರ ಆದರ್ಶಗಳನ್ನು ನೆನಪಿಸುತ್ತದೆ. ಅಮರೇಶ ನುಗಡೋಣಿಯವರ ಬಹುಪಾಲು ಕತೆಗಳು ತಳವರ್ಗದ ನೋವಿನ ಯಾತನೆಗಳನ್ನು ನಿರೂಪಿಸುತ್ತವೆ. ದಲಿತರು ನೋವು, ಅಪಮಾನಗಳನ್ನು ಶತಮಾನಗಳಿಂದಲೂ ಅನುಭವಿಸಿಕೊಂಡು ಬಂದಿದ್ದಾರೆ. ಈ ನೋವು ಅಪಮಾನಗಳಿಂದ ದಲಿತರು ಆಕ್ರೋಶಗೊಂಡು ಮೇಲ್ವರ್ಗದ ವಿರುದ್ಧ ತಮ್ಮ ಹಕ್ಕನ್ನು ಪಡೆಯಲು ಮುಂದೆ ಬಂದಿದ್ದಾರೆ.

ಪುರುಷೋತ್ತಮ ಗಟ್ಟಿಧ್ವನಿಯಲ್ಲಿ ಆಕ್ರೋಶಭರಿತನಾಗಿ ಆಡಿದ ಮಾತುಗಳು ಆ ಸನ್ನಿವೇಶಕ್ಕೆ ಉಚಿತವೆನಿಸುತ್ತವೆ. ನಂತರ ಸಿದ್ದಪ್ಪ ಆಡುವ ಮಾತುಗಳು ಯಾವ ಆಕ್ರೋಶ, ದ್ವೇಷವಿಲ್ಲದಂತಹ ಆಲೋಚನೆಯಿಂದ ಕೂಡಿರುವ ಮಾತಾಗಿದೆ.

ಏಟಿಗೆ ಎದಿರೇಟು, ನೋವಿಗೆ ನೋವು, ಕಣ್ಣಿಗೆ ಕಣ್ಣು, ಅಪಮಾನಕ್ಕೆ ಅಪಮಾನ ಎಂಬ ತತ್ವ ವಿರೋಧಿ ಸಿದ್ದಪ್ಪ. ಇದೇ ರೀತಿಯಲ್ಲಿ ಸಾಗಿದರೆ ಇವೆಲ್ಲಕ್ಕೂ ಕೊನೆಯೆಂಬುದೇ ಇರುವುದಿಲ್ಲ ಎಂಬುದು ಸಿದ್ದಪ್ಪನಿಗೆ ಗೊತ್ತಿದೆ. ಆದುದರಿಂದ ನೋವು ನೀಡಿದವರಿಗೆ ಪ್ರೀತಿ ತೋರಿಸುವುದರಿಂದ ನಮಗೂ ಕೂಡ ಅದೇ ಪ್ರೀತಿಯ ಪ್ರತಿಫಲ ಸಿಗಬಹುದೆಂಬ ಆಶಾವಾದಿತನ ಆತನ ಮಾತುಗಳಲ್ಲಿ ಅಡಗಿದೆ. ಆದರೆ ಈ ಊರಿನವರು ಇದನ್ನು ಒಪ್ಪಲು ಸಾಧ್ಯವೇ ಎಂಬ ಪ್ರಶ್ನೆ ಇಲ್ಲಿ ಮೂಡುತ್ತದೆ. ದಲಿತರು ಇರುವುದೇ ಮೇಲ್ವರ್ಗದವರ ಸೇವೆಗೆ ಎಂಬುದಾದರೆ ಅವರಿಗೂ ಸ್ವಾತಂತ್ರ್ಯ ಸಮಾನತೆ ಪ್ರೀತಿ ಎಲ್ಲದಕ್ಕೂ ಆದ್ಯತೆಯೇ ಇಲ್ಲದಂತಾಗುತ್ತದೆ. ಕೊನೆಯಲ್ಲಿ ಕೇರಿಯ ಜನರು ಸಿದ್ದಪ್ಪನ ಮಾತಿಗೆ ಒಪ್ಪಿ ಊರ ಜನರ ಮನೆಯ ಬಾಗಿಲಿಗೆ ನೀರನ್ನು ತಲುಪಿಸಲು ಎಲ್ಲರೂ ಒಗ್ಗಟ್ಟಾಗಿ ದನಿಯನ್ನು ತೆಗೆದು ಕೈಯನ್ನು ಮೇಲೆ ಮಾಡಿ ಹಾಡತೊಡಗಿದರು.

> ***"ಬಡಿಗೆ ಬೆತ್ತ ತರಲಿಲ್ಲ ನಾವು***
> ***ಸಾವು ನೋವು ನೀಡಲು ಅಲ್ಲ***
> ***ನೀರು ತಂದೀವಿ ನಾವು***
> ***ನಿಮಗೆ ನೀರು ತಂದೀವಿ"*** [3]

ಹಿರೇಬುಡ್ಡನ ಹಾಡಿಗೆ ನೂರಾರು ದನಿಗೂಡಿದವು. ನೀರು ಹೊತ್ತು ಕೇರಿಯ ಮಂದಿ ಊರೊಳಗೆ ಹಬ್ಬಿಕೊಂಡರು. ಮನೆಮನೆಯ ಬಾಗಿಲು ಬಡಿದು 'ನೀರು ತಂದೀವಿ ನಾವು ನಿಮಗೆ ನೀರು ತಂದೀವಿ' ಅಂತ ನಿಲ್ಲುವ ಹೊತ್ತಿಗೆ ಮೂಡಲದ ಒಡಲಿಗೆ ಕೆಂಪೇರುತ್ತಿತ್ತು.

ಈ ಹಾಡು ಕಥೆಯಲ್ಲಿ ಸಮಾನತೆಯನ್ನು ಸಾರುವ ತತ್ವ ಸಂದೇಶವಾಗಿದೆ. 'ನೀರು' ಎಂಬುದು ದಿನನಿತ್ಯದ ಮೂಲಭೂತ ಅವಶ್ಯಕತೆಗಳಲ್ಲಿ ಒಂದಾಗಿದೆ. ಒಂದುಹೊತ್ತಿನ ಊಟ ಇಲ್ಲದಿದ್ದರೂ ಸಹ ಪ್ರತಿನಿತ್ಯದ ಕಾರ್ಯಗಳಿಗೆ ನೀರು ಜೀವಜಲವಾಗಿದೆ. ಇದನ್ನು ನಿಮಗೆ ನೀಡಲು ಬಂದಿದ್ದೇವೆ. ನಿಮ್ಮಂತೆಯೇ ನಾವು ಸಹ, ನಮಗೂ ಸಮಾನತೆಯಿದೆ ಎಂಬುದನ್ನು ಹೇಳುವರು. ಇಲ್ಲಿ ಕೇರಿಯವರ ಹೋರಾಟ ಗಾಂಧೀಜಿ ಮತ್ತು ಅಂಬೇಡ್ಕರ್‌ರವರ ಹೋರಾಟವನ್ನು ಪರೋಕ್ಷವಾಗಿ ನೆನಪಿಸುತ್ತದೆ.

ನೀರು ತಂದವರು ಕಥೆಯು ನಮಗೆ ನೀಡುವ ಪ್ರಮುಖ ಸಂದೇಶವೆಂದರೆ 'ನೀರು ಎಲ್ಲರಿಗೂ ಸಮಾನವಾಗಿ ದೊರೆಯಬೇಕು. ಜಾತಿ, ಧರ್ಮ, ವರ್ಗ ಅಥವಾ ಸಾಮಾಜಿಕ ಸ್ಥಾನಮಾನಗಳ ಆಧಾರದ ಮೇಲೆ ನೀರಿನ ಹಕ್ಕನ್ನು ನಿರಾಕರಿಸಬಾರದು. ಕಥೆಯು ಸಾಮಾಜಿಕ ನ್ಯಾಯ, ಸಮಾನತೆ ಮತ್ತು ಮಾನವೀಯತೆಯ ಮೌಲ್ಯಗಳನ್ನು ಎತ್ತಿ ಹಿಡಿಯುತ್ತದೆ. ಉತ್ತರ ಕರ್ನಾಟಕದ ಗ್ರಾಮೀಣ ಬದುಕಿನ ಹಿನ್ನೆಲೆಯಲ್ಲಿ ನೀರಿನ ಸಮಸ್ಯೆ ಮತ್ತು ಜಾತಿ ವ್ಯವಸ್ಥೆಯ ಸಂಘರ್ಷವನ್ನು ಚಿತ್ರಿಸುತ್ತದೆ. ಸಿದ್ದಪ್ಪನಂತಹ ಹಿರಿಯರ ಮೌಲ್ಯಗಳು, ಕಲಿತ ಹುಡುಗರ ಹೊಸ ಚಿಂತನೆಗಳು ಮತ್ತು ನೀರಿನ ಹಕ್ಕಿನ ಪ್ರಶ್ನೆ ಕಥೆಯ ಪ್ರಮುಖ

**ಕೊನೆಟಿಪ್ಪಣಿಗಳು**

1. ಅಮರೇಶ ನುಗಡೋಣಿ. (2019). *ಕಥೆಗಳ ಕಟ್ಟು*. ಪು.ಸಂ.85
2. ಅದೇ. ಪು.ಸಂ.85
3. ಅದೇ. ಪು.ಸಂ.85

**ಪರಾಮರ್ಶನ ಗ್ರಂಥಗಳು**


- ಅಮರೇಶ ನುಗಡೋಣಿ. (2019). *ಕಥೆಗಳ ಕಟ್ಟು*. ದೇಸಿ ಪುಸ್ತಕ ಪ್ರಕಾಶನ.
- ಕಲ್ಯಾಣರಾವ ಜಿ. ಪಾಟೀಲ. *ನುಡಿಸಾಂಗತ್ಯ*
- ಪ್ರಸಾದಸ್ವಾಮಿ, ಎಸ್. (2014). *ಶೀಲವೆಂಬುದು ಸೂತಕ*. ಕಣ್ವ ಪ್ರಕಾಶನ.